# ಮುಂಡಿಗೆಕೆರೆ ಪಕ್ಷಿಧಾಮಕ್ಕೆ ವಿಜ್ಞಾನಿಗಳ ಭೇಟಿ



ಶಿರಸಿ, ನ.18: ಕೆರೆ ಸಮ್ಮೇಳನಕ್ಕೆ ಆಗಮಿಸಿದ್ದ ಪಕ್ಷಿ ಮತ್ತು ಜೌಗು ಭೂಮಿ, ಸಂಶೋಧನ ತಂಡ ಪರಿಸರ ವಿಜ್ಞಾನಕೇಂದ್ರ, ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು ಇದರ ವಿಜ್ಞಾನಿಗಳ ತಂಡ ಸಂಶೋಧನ ವಿದ್ಯಾರ್ಥಿಗಳೊಂದಿಗೆ ಮುಂಡಿಗೆಕೆರೆ ಪಕ್ಷಿಧಾಮಕ್ಕೆ ಆಗಮಿಸಿ ಸಸ್ಯ ಪ್ರಭೇದಗಳ ಹಾಗೂ ಜೀವ ವೈವಿಧ್ಯತಾ ಅಧ್ಯಯನ ನಡೆಸಿತು.

ಮುಂಡಿಗೆಕೆರೆಯ ಐತಿಹಾಸಿಕ ಮಹತ್ವವನ್ನುಜಾಗೃತ ವೇದಿಕೆ ಸೋಂದಾದ ರತ್ನಾಕರ ಹೆಗಡೆ ಬಾಡಲಕೊಪ್ಪ ವಿವರಿಸಿದರು. ಅಲ್ಲಿಗೆ ಸಂತಾನಾಭಿವೃದ್ಧಿಗೆ ಹಾಗು ವಸತಿಗೆ ಬರುವ ಪಕ್ಷಿಗಳ ಬಗ್ಗೆ ಪಕ್ಷಿತಜ್ಞ ಡಾ. ಪಿ.ಡಿ ಸುದರ್ಶನ್‌ರವರು ದಾಖಲಿಸಿದ ಅಂಶಗಳೊಂದಿಗೆ ಸವಿಸ್ತಾರವಾಗಿ ದೃಶ್ಯ ಮಾಧ್ಯಮದ ಮೂಲಕ ಆದಿತ್ಯ ಹೆಗಡೆ ಬಾಡಲಕೊಪ್ಪ ಮಾಹಿತಿ ನೀಡಿದರು.

ಈ ವೇಳೆ ಭಾರತೀಯ ಪರಿಸರ ವಿಜ್ಞಾನ ಕೇಂದ್ರದ ಡಾ. ಟಿ. ವಿ ರಾಮಚಂದ್ರ, ಪಕ್ಷಿ ತಜ್ಞ ಡಾ. ಹರೀಶ್ ಭಟ್, ಡಾ. ಎಂ. ಡಿ ಸುಭಾಷ್‌ಚಂದ್ರನ್ (ಐ. ಐ. ಎಸ್ ಸಿ ಕುಮಟಾ), ಡಾ. ಪ್ರಕಾಶ್ ಮೇಸ್ತ (ಐ. ಐ. ಎಸ್ ಸಿ ಕುಮಟಾ) ಮುಂತಾದ ವಿಜ್ಞಾನಿಗಳಿದ್ದರು.

ಅಧ್ಯಯನತಂಡದಲ್ಲಿಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಿಂದ ಹಾಗೂ 8 ಹೊರ ರಾಜ್ಯಗಳಿಂದ ತಜ್ಞರು, ಯುವ ವಿಜ್ಞಾನಿಗಳು, ವಿದ್ಯಾರ್ಥಿಗಳು ಸೇರಿ ಒಟ್ಟು 70ಕ್ಕೂ ಹೆಚ್ಚು ಜನ ಉಪಸ್ಥಿತರಿದ್ದರು. ಜಾಗೃತ ವೇದಿಕೆಯು ಸ್ವರ್ಣವಲ್ಲಿ ಶ್ರೀಗಳ ಮಾರ್ಗದರ್ಶನದಲ್ಲಿ ಮುಂಡಿಗೆಕೆರೆ ಸಂರಕ್ಷಣೆ ಮಾಡುತ್ತಿರುವ ಕುರಿತು ಸಂತಸ ವ್ಯಕ್ತಪಡಿಸಿದರು.